## ಗುರುವಾರ, ೧೨ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಗೌರವಾನ್ವಿತ ಡಾ.ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೧ ಘಂಟೆಗೆ ಸಭೆ ಸೇರಿತು.

**ಮಾನ್ಯ ಅಧ್ಯಕ್ಷರು:** ದಾಖಲಾತಿ ಪುಸ್ತಕದಲ್ಲಿ ಇನ್ನೂ ಸಹಿ ಮಾಡದಿರುವ ಸದಸ್ಯರು ಯಾರಾದರೂ ಇದ್ದರೆ ಈಗ ಸಹಿ ಮಾಡಬಹುದು.

(ಯಾರೂ ಮುಂದೆ ಬರುವುದಿಲ್ಲ)

ಇನ್ನೂ ಸಹಿ ಮಾಡಿಲ್ಲದ ಸದಸ್ಯರು ಯಾರೂ ಇಲ್ಲ ಎಂದು ತೋರುತ್ತದೆ. ಈಗ ನಾವು ಮುಂದಿನ ವಿಷಯದ ಕಡೆಗೆ ಸಾಗೋಣ. ನಾವು ಎತ್ತಿಕೊಳ್ಳಬೇಕಾದ ಮೊದಲನೆಯ ವಿಷಯ ಎಂದರೆ ಪಂಡಿತ್ ಜವಾಹರ್ ಲಾಲ್ ನೆಹರು ಅವರ ನಿರ್ಣಯ. ಈ ಪ್ರಮುಖವಾದ ನಿರ್ಣಯವನ್ನು ಪರಿಗಣಿಸಲು ಸಾಕಷ್ಟು ಸಮಯ ಸಿಕ್ಕಿಲ್ಲ ಎಂದು ಕೆಲವು ಸದಸ್ಯರು ಭಾವಿಸುತ್ತಿದ್ದಾರೆ ಎಂದು ನನಗೆ ತಿಳಿದುಬಂದಿದೆ. ಈ ನಿರ್ಣಯ ಬಹಳ ಮುಖ್ಯವಾದದ್ದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಅದನ್ನು ಪೂರ್ತಿಯಾಗಿ ಪರಿಗಣಿಸಲು ಸಾಕಷ್ಟು ಸಮಯ ಸಿಕ್ಕಿಲ್ಲ ಎಂದು ಯಾವ ಸದಸ್ಯರಿಗೂ ಅನ್ನಿಸುವುದು ನನಗೆ ಇಷ್ಟವಿಲ್ಲ. ಸದನವು ಇಚ್ಛಿಸಿದರೆ ಈ ಚರ್ಚೆಯನ್ನು ನಾಳೆಗೆ ಮುಂದೂಡಲು ನಾನು ಸಿದ್ಧನಾಗಿದ್ದೇನೆ.

**ಗೌರವಾನ್ವಿತ ಸದಸ್ಯರು:** ಆಗಲಿ.

**ಮಾನ್ಯ ಅಧ್ಯಕ್ಷರು:** ಹಾಗಾದರೆ ಈ ವಿಚಾರವಾಗಿ ಇನ್ನೊಂದು ಸಂಗತಿ ಇದೆ. ಅದರ ಬಗೆಗೆ ಸದನದ ಸಲಹೆ ನನಗೆ ಬೇಕು. ನಮ್ಮಲ್ಲಿ ಒಂದು ನಿಯಮಗಳ ಸಮಿತಿ ಇದೆ. ಅದರ ಸದಸ್ಯರು ಸಭೆ ಸೇರಿ ನಿಯಮಗಳನ್ನು ಸಿದ್ಧಗೊಳಿಸಿ ನಮ್ಮ ಮುಂದೆ ಮಂಡಿಸಬೇಕು. ಅವರಿಗೆ ಸಭೆಯ ಸಾಮಾನ್ಯ ಅಧಿವೇಶನಕ್ಕಿಂತ ಬೇರೆಯಾದ ಸಮಯ ಬೇಕು. ನೀವು ಒಪ್ಪಿದರೆ ಅವರು ಈ ಸದನವನ್ನು ಮುಂದೂಡಿದ ಅನಂತರ ಸಭೆ ಸೇರುತ್ತಾರೆ ಮತ್ತು ನಮಗೆ ಸಾಧ್ಯವಾದಷ್ಟು ಕೆಲಸವನ್ನು ನಾವು ಮಾಡಬೇಕು. ಆದರೆ ಅದು ತನ್ನ ಕೆಲಸವನ್ನು ಮುಗಿಸಲಾಗದಿದ್ದರೆ, ನಿಯಮಗಳ ಸಮಿತಿಯು ನಾಳೆ ಸಭೆ ಸೇರಬೇಕಾಗುತ್ತದೆ. ಈ ಸದನವು ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಲು ಇಷ್ಟ ಪಡುತ್ತದೆಯೇ ಅಥವಾ ಅಪರಾಹ್ನದಲ್ಲಿಯೇ ಎಂದು ತಿಳಿಯಲು ನಾನು ಬಯಸುತ್ತೇನೆ. ಏಕೆಂದರೆ, ನಾವು ಬೆಳಗ್ಗೆ ಅಥವಾ ಅಪರಾಹ್ನ ಒಂದು ಅಧಿವೇಶನವನ್ನು ಮಾತ್ರ ನಡೆಸಬೇಕು ಎಂದು ನಾನು ಸೂಚಿಸಲು ಬಯಸುತ್ತೇನೆ. ಅದರಿಂದಾಗಿ ನಿಯಮಗಳ ಸಮಿತಿಗೆ ತನ್ನ ಕೆಲವನ್ನು ಮಾಡಲು ಉಳಿದ ಅರ್ಧದಿನ ದೊರಕುತ್ತದೆ. ಸದನವು ಬೆಳಗಿನ ಅಧಿವೇಶನವನ್ನು ಬಯಸಿದರೆ, ನಾವು ಬೆಳಗ್ಗೆ ಸಭೆ ಸೇರೋಣ.

**ಕೆಲವು ಗೌರವಾನ್ವಿತ ಸದಸ್ಯರು:** ನಮಗೆ ಬೆಳಗಿನ ಅಧಿವೇಶನಗಳು ಬೇಕು.

**ಕೆಲವು ಗೌರವಾನ್ವಿತ ಸದಸ್ಯರು:** ಅಪರಾಹ್ನದ ಅಧಿವೇಶನಗಳು.

**ಮಾನ್ಯ ಅಧ್ಯಕ್ಷರು:** ಈ ವಿಚಾರವಾಗಿ ಒಂದು ನಿರ್ಧಾರಕ್ಕೆ ಬರುವುದು ನನಗೆ ಕಷ್ಟ ಎಂದು ಭಾವಿಸುತ್ತೇನೆ. ಸದಸ್ಯರಿಗೆ ಕೈಯ್ಯನ್ನೆತ್ತುವ ತೊಂದರೆಯನ್ನು ನಾನು ಕೊಡಬೇಕಾಗುತ್ತದೆ. ಕೈ ಎತ್ತಿ.

(ಬೆಳಗಿನ ಅಧಿವೇಶನದ ಪರವಾಗಿ ಹೆಚ್ಚು ಜನ ಸದಸ್ಯರು ಕೈ ಎತ್ತುತ್ತಾರೆ.)

ಹೆಚ್ಚಿನ ಸಂಖ್ಯೆಯ ಸದಸ್ಯರು ಬೆಳಗಿನ ಅಧಿವೇಶನವನ್ನು ಇಷ್ಟ ಪಡುತ್ತಾರೆ ಎಂದು ತೋರುತ್ತದೆ. ಈ ನಿರ್ಣಯಕ್ಕೆ ಸಂಬಂಧಿಸಿದಂತೆ ನಾಳೆ ಬೆಳಗ್ಗೆ ನಾವು ಅಧಿವೇಶನವನ್ನು ಇಟ್ಟುಕೊಳ್ಳೋಣ ಮತ್ತು ಅಪರಾಹ್ನ, ಅಗತ್ಯ ಕಂಡುಬಂದರೆ ನಿಯಮಗಳ ಸಮಿತಿಯ ಸಭೆಯನ್ನು ಇಟ್ಟುಕೊಳ್ಳೋಣ. ಈ ನಿರ್ಣಯಕ್ಕೆ ಏನಾದರೂ ತಿದ್ದುಪಡಿಯನ್ನು ಮಂಡಿಸಲು ಯಾರಾದರೂ ಸದಸ್ಯರು ಬಯಸಿದರೆ ಈ ದಿನದ ಅವಧಿಯಲ್ಲಿ ಅವರು ಕಾರ್ಯದರ್ಶಿಯವರಿಗೆ ಆ ತಿದ್ದುಪಡಿಯನ್ನು ಕೊಡಬೇಕು ಎಂದು ನಾನು ಪ್ರಾರ್ಥಿಸುತ್ತೇನೆ. ನಾಳೆ ನಾವು ಆ ವಿಚಾರವಾಗಿ ಚರ್ಚೆಯನ್ನು ಕೈಗೆತ್ತಿಕೊಳ್ಳೋಣ. ಕಾರ್ಯದರ್ಶಿಯವರು ಸಾಧ್ಯವಾದರೆ ಆ ತಿದ್ದುಪಡಿಗಳನ್ನು ಸದಸ್ಯರ ಗಮನಕ್ಕೆ ತರಲು ಪ್ರಯತ್ನಿಸುತ್ತಾರೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಶನಿವಾರವೂ ಸಭೆ ಇರುತ್ತದೆಯೆ?

**ಮಾನ್ಯ ಅಧ್ಯಕ್ಷರು** : ಶನಿವಾರವೂ ನಾವು ಸಭೆ ಸೇರಬೇಕು ಎಂದು ನಾನು ಭಾವಿಸುತ್ತೇನೆ. ಅದು ನನ್ನ ಅಭಿಪ್ರಾಯ. ಆದರೆ ಅದು ಸಂಪೂರ್ಣವಾಗಿ ಈ ಸದನದ ಕೈಯಲ್ಲೇ ಇದೆ. ನಾವು ಶನಿವಾರ ಕೂಡ ಸಭೆ ಸೇರಲಿದ್ದೇವೆ ಎಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಾವು ಶನಿವಾರ ಸಭೆ ಸೇರಬಾರದು ಎಂದು ನಾನು ಭಾವಿಸುತ್ತೇನೆ. ನಮ್ಮೊಳಗಿರುವ ಸಮಸ್ಯೆಗಳನ್ನು ಕುರಿತು ಶಾಂತವಾಗಿ ಚರ್ಚೆ ಮಾಡಲು ನಮಗೆ ಒಂದು ದಿನ ಬಿಡುವು ಇರಲಿ.

**ಶ್ರೀ ಶ್ರೀಪ್ರಕಾಶ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಾವು ಭಾನುವಾರಗಳಲ್ಲಿ ಸಭೆ ಸೇರಬಾರದು ಎಂದು ನಾನು ಭಾವಿಸುತ್ತೇನೆ. ಅದು ಪಂಡಿತ್ ಹೃದಯನಾಥ್ ಕುಂಜ್ರು ಅವರಿಗೆ ಶಾಂತವಾಗಿ ಚರ್ಚೆ ಮಾಡಲು ಸಾಕಾಗುತ್ತದೆ.

**ಮಾನ್ಯ ಅಧ್ಯಕ್ಷರು** : ಅದನ್ನು ನಾವು ನಾಳೆ ಪರಿಗಣಿಸೋಣ. ಈ ಸದನಕ್ಕೆ ಸಂಬಂಧಿಸಿ ಹೇಳುವುದಾದರೆ ಈಗ ನಾವು ಇದನ್ನು ನಾಳೆ ಬೆಳಗ್ಗೆ ೧೧ ಗಂಟೆಯವರೆಗೆ ಮುಂದೂಡಬೇಕಾಗುತ್ತದೆ. ಎಂದು ನಾನು ಭಾವಿಸುತ್ತೇನೆ. ನಿಯಮಗಳ ಸಮಿತಿಯ ಸದಸ್ಯರು ಸುಮಾರು ಅರ್ಧ ಗಂಟೆಯ ಅನಂತರ ಸಭೆ ಸೇರಬೇಕೆಂದು ನಾನು ಬಯಸುತ್ತೇನೆ. ಅಷ್ಟರಲ್ಲಿ ಅವರಿಗೆ ಸಭೆ ಸೇರಲು ಒಂದು ಕೊಠಡಿಯನ್ನು ಗೊತ್ತುಮಾಡೋಣ.

ಸದನವನ್ನು ನಾಳೆ ಬೆಳಗ್ಗೆ ೧೧ ಗಂಟೆಯವರೆಗೆ ಮುಂದೂಡಲಾಗಿದೆ.

**ಡಾ. ಸರ್ ಹರಿಸಿಂಗ್ ಗೌರ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನಿರ್ಣಯದ ಗೌರವಾನ್ವಿತ ಸೂಚಕರು ಅದನ್ನು ಔಪಚಾರಿಕವಾಗಿ ಮಂಡಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ, ನಿರ್ಣಯದ ಪೂರ್ಣ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲು ಸದಸ್ಯರಿಗೆ ಸಾಧ್ಯವಾಗುತ್ತದೆ ಮತ್ತು ಬಹಳ ಉಪಯುಕ್ತವಾಗುತ್ತದೆ ಎಂದು ನನಗೆ ತೋರುತ್ತದೆ. ಅದಕ್ಕೆ ಅನುಗುಣವಾಗಿ ತಿದ್ದುಪಡಿಗಳನ್ನು ನಾವು ರೂಪಿಸಿಕೊಳ್ಳಬಹುದು ಮತ್ತು ಇವುಗಳನ್ನು ನಾಳೆ ಅಥವಾ ನಾಡಿದ್ದು ಚರ್ಚೆಗೆ ಎತ್ತಿಕೊಳ್ಳಬಹುದು.

**ಶ್ರೀ ಸತ್ಯನಾರಾಯಣ ಸಿನ್ಹ** (ಬೇರಾರ್ : ಸಾಮಾನ್ಯ) : ಸದನವನ್ನು ಈಗಾಗಲೇ ಮುಂದೂಡಲಾಯಿತಲ್ಲ.

**ಮಾನ್ಯ ಅಧ್ಯಕ್ಷರು** : ಸರ್ ಹರಿಸಿಂಗ್ ಗೌರ್ ಅವರು ಸಲಹೆ ಮಾಡಿರುವುದೇನೆಂದರೆ ಸೂಚಕರು ಇಂದು ನಿರ್ಣಯವನ್ನು ಮಂಡಿಸಬಹುದು, ಅವರು ತಮ್ಮ ಭಾಷಣದಲ್ಲಿ ತಮ್ಮ ಅಭಿಪ್ರಾಯ ಏನೆಂದು ವಿವರಿಸಬಹುದು, ಆಗ ಇತರ ಸದಸ್ಯರಿಗೆ ಅದರ ಪೂರ್ಣ ಅರಿವಾಗಿರುತ್ತದೆ, ಅದನ್ನು ಕುರಿತು ನಾಳೆ ಚರ್ಚೆ ಮಾಡಬಹುದು. ಮೊದಲು ನಾನೂ ಕೂಡ ಹಾಗೆಯೇ ಯೋಚನೆ ಮಾಡಿದ್ದೆ, ಆದರೆ ಅನಂತರ ಸದಸ್ಯರು ಅದನ್ನು ನಾಳೆಯೇ ಇಡಿಯಾಗಿ ಪರಿಗಣಿಸಲು ಇಷ್ಟ ಪಡಬಹುದು ಎಂದು ಭಾವಿಸಿದೆ.

**ಕೆಲವು ಗೌರವಾನ್ವಿತ ಸದಸ್ಯರು:** ನಾಳೆ.

**ಮಾನ್ಯ ಅಧ್ಯಕ್ಷರು:** ಇಲ್ಲಿ ಅಭಿಪ್ರಾಯ ಭೇದ ಇರುವಂತೆ ತೋರುತ್ತಿದೆ. ಈ ವಿಷಯವನ್ನು ಮತಕ್ಕೆ

ಹಾಕಲು ನಾನು ಇಷ್ಟ ಪಡುವುದಿಲ್ಲ, ಅದರಲ್ಲೂ ವಿಶೇಷವಾಗಿ ಸದನವನ್ನು ಮುಂದೂಡಿರುವುದಾಗಿ ನಾನು ಈಗಾಗಲೇ ಘೋಷಿಸಿದ್ದೇನೆ. ಆದ್ದರಿಂದ ನಾವು ಈಗ ಮುಂದೂಡೋಣ. ಈ ಸದನವನ್ನು ನಾಳೆ ಬೆಳಗ್ಗೆ ೧೧ ಗಂಟೆಯವರೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ಶುಕ್ರವಾರ ೧೩ನೇ ಡಿಸೆಂಬರ್ ೧೯೪೬ರ ಬೆಳಗ್ಗೆ ೧೧ ಗಂಟೆಯವರೆಗೆ ಮುಂದೂಡಲಾಯಿತು.